ಕೋಲಾರ ಡಿಸ್ಟ್ರಿಕ್ಟ್.

ತಾರೀಖು 2ನೆ ನವೆಂಬರ್ 1904ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕೀ ಪೊಬಲಿಗೋಸ್ಕರ ವಾಗಿ, ತಾಲ್ಲೂಕು ಅಮಲ್ದಾರ್ರು ಕಛೇರಿಯಲ್ಲಿ 1904ನೆ ಇಸವಿ ಡಿಸೆಂಬರ್ ಮಾಹೆ 15ನೆ ತಾರೀಖಿ ನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂ ದ ಪ್ರಸಿದ್ಧಪಡಿಸಲ್ಪಟ್ಟು ಇದೆ.

1. ಜೋಡಿ ವಡಗೂರು-ಹುತ್ತೂರು ಹೋಬಳಿ —ಕೋಲಾರ ತಾಲ್ಲೂಕು.
2. ಜೋಡಿ ದಂಡಿಗಾನಹಳ್ಳಿ-ವೆಕ್ಕಲೇರಿ ಹೋಬಳಿ—ಕೋಲಾರ ತಾಲ್ಲೂಕು.
3. ಜೋಡಿ ದೊಡ್ಡಗಾಂಪ್ಲಹಳ್ಳಿ-ಕ್ಯಾಸಂಬಳ್ಳಿ ಹೋಬಳಿ —ಬವರಿಂಗಪೇಟೆ ತಾಲ್ಲೂಕು.

(ಹೆಚ್ಚು ತದಬೇಲ್ ಬಗ್ಗೆ 1904ನೆ ಮಾರ್ಚ್ಕಂ 45ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 619-620-621-622ನೆ ನಂಬರು ಪೇಜು ನೋಡತಕ್ಕದ್ದು.)

ಕೆ. ಏ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವೀಜ್ಞ್ ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟಿನಲ್ಲಿ.

ಸ್ಯ 1904—1905ನೆ ಇಸವಿ ಮಿ|| ಅರ್ಜೀ ನಂಬರ್ 110.

ಮೃತಪಟ್ಟ ಸೆಟ್ಟೂರು ರಾಮಸ್ವಾಮ್ಯಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೆ ಎಸ್. ವೆಂಕಟರಂಗೈಯ್ಯಂಗಾರ್ರು, 2ನೆ ಎಸ್. ನರಸಿಂಹೈಯ್ಯಂಗಾರ್ರು, 3ನೆ ಎಸ್. ಆರ್. ನರಸಿಂಹೈಯ್ಯಂಗಾರ್ರು, 4ನೆ ಎಸ್. ಕೃಷ್ಣೈಯ್ಯಂಗಾರ್ರು ಎಂಬ ಅರ್ಜೀದಾರರು ಮೃತಪಟ್ಟ ಸದರೀ ಸೆಟ್ಟೂರು ರಾಮಸ್ವಾಮ್ಯಯ್ಯಂಗಾರ್ರಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಸದರೀ ಸೆಟ್ಟೂರು ರಾಮಸ್ವಾಮ್ಯಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ವರಖಾಸ್ತುದಾರರಾದ ಎಸ್. ವೆಂಕಟರಂಗೈಯ್ಯಂಗಾರ್ರು ಮೈಸೂರಿನ ಅರ್ಜಿಯನ್ನು ಸ್ಯ 1904ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 19ರಲ್ಲು ಕೇ/ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೆಟ್ಟೂರು ರಾಮಸ್ವಾಮ್ಯಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ನಿಮಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1904ನೆ ಇಸವಿ ನವೆಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟು ನೊಹರಿನಿಂ ನನ್ನು ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1904 - 1905ನೆ ಇಸವಿ ಮಿ|| ಅರ್ಜೀ ನಂಬರ್ 120.

ಮೃತಪಟ್ಟ ಸಿ. ಆರ್. ಕೃಷ್ಣಮೂರ್ತಿರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮದರಾಸ್ ಎಗ್ಮೋರ್ ಹೈರೋಡ್ 28ನೆ ನಂಬರ್ನಲ್ಲಿರುವ ಸಿ. ಜಯವದನರಾವ್, ಬಿ. ಎ., ಯವರು, ಮೃತಪಟ್ಟ ಸದರೀ ಸಿ. ಆರ್. ಕೃಷ್ಣಮೂರ್ತಿರಾಯರಿಗೆ ಮುಖ್ಯ ವಾರಸ್ದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಸದರೀ ಸಿ. ಆರ್. ಕೃಷ್ಣಮೂರ್ತಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ವರಖಾಸ್ತುದಾರರಾದ ಸಿ. ಹಯವದನರಾಯರ ಅರ್ಜಿಯನ್ನು ಸ್ಯ 1904ನೆ ಇಸವಿ ಡಿಸೆಂಬರು ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿ. ಆರ್. ಕೃಷ್ಣಮೂರ್ತಿರಾಯರ ಆಸ್ತಿಗೆ ಹಕ್ಕುದಾರರಾದ ನಿಮಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1904ನೆ ಇಸವಿ ನವೆಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟು ನೊಹರಿನಿಂ ನನ್ನು ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟಿನಲ್ಲಿ.

ಸ್ಯ 1904—1905ನೆ ಇಸವಿ ಮಿ|| ಅರ್ಜೀ ನಂಬರ್ 53.

ಮೃತಪಟ್ಟ ಲೇಟ್ ಶ್ಯಾ: ನಾಗಸಮುದ್ರದ ಭೀಮಂಣ ಎಂಬುವರ ಆಸ್ತೀ ವಿಷಯದಲ್ಲಿ —

ಅರ್ಜೀದಾರು 1. ಹನುಮಂತರಾಯ, 2. ಪಾಂಡುರಂಗರಾಯ ಎಂಬುವರು, ಮೃತಪಟ್ಟ ಸದರೀ ಭೀಮಂಣನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೊಳಕಾಲ್ಮೂರು ತಾಲ್ಲೂಕು ನಾಗೇನಮುದ್ರದ ಸ್ಥಳದ 1. ಹನುಮಂತರಾಯ, 2. ಪಾಂಡುರಂಗರಾಯ ಎಂಬುವರು ನಾಗಸಮುದ್ರ ವಾಸಸ್ಥರಾಗಿ ಮೃತಪಟ್ಟ ಭೀಮಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 744-8-3 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೆ ಇಸವಿ VIIನೆ ರೆಗ್ಯುಲೇಷ್ನ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಹನುಮಂತರಾಯರು ವಗೈರೇರ ಅರ್ಜಿಯನ್ನು ಸ್ಯ 1904ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಪರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಭೀಮಂಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1904ನೆ ಇಸವಿ ನವೆಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ವೆಂಕಟವರದ ಅಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಚಿಕ್ಕಬಳ್ಳಾಪುರ ಮುನ್ಸಿಫ್ ಕೋರ್ಟಿನಲ್ಲಿ.

ಸ್ಯ 1903—04ನೆ ಇಸವಿ ಮಿ॥ ನಂಬರು 392.

ದಿವಾಳಿಯಾದ ಡಿಕ್ರಿದೇಣೇದಾರ ಚಿಕ್ಕಬಳ್ಳಾಪುರದಲ್ಲಿರುವ ವೆಂಕಟನರಶಿಹ್ಮಾಚಾರ್ಯರ ಮಕ್ಕಳು ನೆರಳೆಮರದ ಕೃಷ್ಣರಾಯರ ವಿಷಯದಲ್ಲಿ—

ಈ ವಿಷಯವು ಮುನಸೀಫ್ A. ನರಸಿಹ್ಮಯ್ಯಂಗಾರ್, ಎಸ್ಕ್ವೈಯರ್, B. A., & B. L., ಯವರ ರೂಬರೂಬ್ ದಿವಾಳಿಯಾದವರ ಮತ್ತು ಅವರ ತರಫ್ ಪ್ಲೀಡರ್ ವೆ॥ ವೀರಪ್ಪನವರ ಸಮಕ್ಷವದಲ್ಲಿಯೂ ಮತ್ತು ದಿವಾಳಿದಾರನ 1ನೆ ಲೇಣೇದಾರರಾದ ಭಾಸ್ಕರಪ್ಪನವರ ತರಫ್ ಪ್ಲೀಡರ್ ವೆ॥ ಸೂರಪ್ಪನವರ, ಯದುರಾಗಿಯೂ ಬಾಕಿ ಲೇಣೇದಾರರು ಗೈರ್ ಹಾಜರ್ ದರ್ಯಾಫ್ತ್ ಮಾಡಲ್ಪಟ್ಟಿತು. ಮತ್ತು ಸ್ಯ 1904ನೆ ಇಸವಿ ಅಕ್ಟೋಬರ್ 30ನೆ ತಾರೀಖಿನ ಬಾಬತು ರಿಸೀವರಾದ ಹೆ॥ ಮುನಿಷಿ ಮೂರ್ತಿರಾಯರ ಸರಟಿಫಿಕೇಟ್ ಓದಲಾಯಿತು. ಇದೇ ವಿಷಯದಲ್ಲಿ ಸ್ಯ 1904ನೆ ಇಸವಿ ಅಕ್ಟೋಬರು 14ನೆ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟಿಯಲ್ಲಿ ಕಂಡ ಯಾವ ಸಾಲಗಳಿಗೂ ಅರ್ಜಿ ದಿವಾಳಿಯಾದವರನ್ನು ಎಲ್ಲಾ ಜವಾಬುದಾರಿಯಿಂದಲೂ ನಿಬಾಲಸ್ಮಾಡಿರುವದಲ್ಲದೆ ಆ ಬಗ್ಗೆ ಸದರೀಯವರನ್ನು ದಸ್ತಗಿರಿ ಮಾಡಿಕೈದು ಮಾಡುವದರ ದೆಸೆಯಿಂದಲೂ ಬಿಡಗಡೇ ಮಾಡಿ ಇರುವದಾಗಿ ಇದರಿಂದ ಹುಕುಂ ಮಾಡಲ್ಪಟ್ಟು ಇದೆ.

ಸ್ಯ 1904ನೆ ಇಸವಿ ನವೆಂಬರು 14ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಕತ್ತುನಿಸಿ ಕೊಡಲ್ಪಟ್ಟಿದೆ.

ಸಾಲಗಳ ತಪಶೀಲ್.

ಜನರಲ್ ನಂಬರ್.	ಲೇಣೆದಾರರ ಹೆಸರು.		ಸಾಲದ ಮೊಬಲಗು. ರೂ.	ಆ.	ಪೈ	ಸಾಲಗಳ ಸ್ವಭಾವ.
1	ಚಿಕ್ಕಬಳ್ಳಾಪುರ ಅದಾಲತ್ತು ಬ್ಯಾಂಕಿಗೆ	...	85	0	0	ಡಿಕ್ರಿ ಬಾಬತು.
2	ಡಿಟೋ ಡಿಟೋ	..	37	0	0	ಡಿಟೋ
3	ಡಿಟೋ ರಾಜಧಾನಿ ಬ್ಯಾಂಕಿಗೆ	..	30	0	0	ಡಿಟೋ
4	ಡಿಟೋ ಲಕ್ಷ್ಮೀಸಹಾಯದ ಬ್ಯಾಂಕಿಗೆ	...	25	0	0	ಡಿಟೋ
5	ಡಿಟೋ ಸುಬ್ರಮಣ್ಯೇಶ್ವರಸ್ವಾಮಿ ಬ್ಯಾಂಕಿಗೆ	..	95	0	0	ಡಿಟೋ
6	ಡಿಟೋ ಕೋದಂಡರಾಮಸ್ವಾಮಿ ಬ್ಯಾಂಕಿಗೆ	...	50	0	0	ಡಿಟೋ
7	ಡಿಟೋ ಶುಭಾದಿಕರ್ಮಧನಾಭಿವೃದ್ಧಿ ಬ್ಯಾಂಕಿಗೆ	..	150	0	0	ಡಿಟೋ
8	ಡಿಟೋ ವೆಂಕಟರಮಣಸ್ವಾಮಿ ಬ್ಯಾಂಕಿಗೆ	..	70	0	0	ಡಿಟೋ
9	ಶ್ಯಾನಭೋಗ ಕೀನಪ್ಪನವರಿಗೆ	...	36	0	0	ಪತ್ರದ ಬಾಬತು.
	ಜುಮ್ಲಾ	..	578	0	0	

ಎ. ನರಸಿಹ್ಮಯ್ಯಂಗಾರ್,
ಮುನಸೀಫ್.

ನೋಟಿಸ್.

ತಾರೀಖು 11ನೆ ಅಕ್ಟೋಬರ್ 1904, ಕೃಷ್ಣರಾಜಪೇಟೆ.

ಮೈಸೂರು ಡಿಸ್ಟ್ರಿಕ್ಟ್ ಕೃಷ್ಣರಾಜಪೇಟೆ ತಾಲ್ಲೂಕು ಸಂತೆಬಾಚಹಳ್ಳಿ ಹೋಬಳಿ ಜೋಡಿ ಕೈಗೋನಹಳ್ಳಿ ಗ್ರಾಮದ ಸರ್ವೇ ಜಮಾಬಂದಿಯನ್ನು 1904ನೆ ಇಸವಿ ಡಿಸೆಂಬರ್ 3ನೆ ತಾರೀಖು ಶನಿವಾರ ಕೈಗೋನಹಳ್ಳಿ ಮೊಕ್ತಾಂನಲ್ಲಿ ನಡಿಸುತ್ತೆಂದು ಇದರಿಂದ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಆದಿವಸ ಗ್ರಾಮದ ಎಲ್ಲಾ ಜೋಡಿದಾರುಗಳು ಮತ್ತು ರೈತರುಗಳು ಸಹ ಈ ಕೆಳಗೆ ಸೈ ಮಾಡಿರುವವರ ಸಮಕ್ಷವು ಹಾಜರಾಗಬೇಕು.

ತಾರೀಖು 2ನೆ ನವೆಂಬರ್ 1904, ಕೃಷ್ಣರಾಜಪೇಟೆ.

ದೇವಾಂಗ ಅಗ್ರಹಾರದ ವೃತ್ತಿಗೆ ಸೇರಿದ ಗ್ರಾಮಗಳ ಏಜಂಟ್ ವೆಂಕಟರಾಮಯ್ಯನವರಿಂದ ವೆಂಗಟನಾರಣಭಟ್ಟ ವಗೈರೇರಿಗೆ ಬರಬೇಕಾದ ಸುವರ್ಣಾದಾಯದ ಮೊಬಲಗು ವಿಚಾರದಲ್ಲಿ ಬಂದಿರುವ ಫಿರ್ಯಾದು ತನಿಖೆಯನ್ನು ಬರುವ ಡಿಸೆಂಬರು 13, 14 ಮತ್ತು 15ನೆ ತಾರೀಖುಗಳಲ್ಲಿ ಕೃಷ್ಣರಾಜಪೇಟೆ ಮೊಕ್ತಾಂನಲ್ಲಿ ನಮ್ಮ ರೂಬರೂಬ್ ವಿಚಾರಿಸಿ ಇವರ್ಸ್ಥೆಪಡಿಸುತ್ತೆ.

ಬಾಕಿ ತಪಶೀಲ್‌ಗಳನ್ನು 1904ನೆ ಇಸವಿ 44ನೆ ನಂಬರ್ ಮೈಸೂರು ಗೆಜೆಟ್ಟಿನ 617ನೆ ಪುಟದ 2ನೆ ಭಾಗದಲ್ಲಿ ನೋಡಿ.

ಎ. ಸುಬ್ರಮಣ್ಯ್ಯ,
ಅಸಿಸ್ಟೆಂಟ್ ಕಮಿಷನರ್, ಕೃಷ್ಣರಾಜಪೇಟೆ ಡಿವೀಜ್.